ಮನೆ ಬಾಗಿಲಲ್ಲೇ ಸೇವಾ ಸೌಲಭ್ಯ

ಗ್ಯಾಸ್ ಸ್ಟವ್, ಮಿಕ್ಸಿ, ಕುಕ್ಕರ್ ಜಾರ್, ಪಂಪ್ ಸ್ಟವ್ ಮತ್ತಿತರ ಅಡಿಗೆ ಮನೆಯಲ್ಲಿ ಬಳಸುವ ಸಾಧನಗಳ ದುರಸ್ತಿಯನ್ನು ನಿಮ್ಮ ಮನೆ ಬಾಗಿಲಲ್ಲೇ ಮಾಡಿಕೊಡಲಾಗುವುದು. ದೂರವಾಣಿ ಕರೆ ಮಾಡಿ ಸಂಪರ್ಕಿಸಿದ ಅರ್ಧ ಗಂಟೆಯೊಳಗೆ ಸೇವೆ ಲಭ್ಯ. ಅಗತ್ಯವಾದಲ್ಲಿ ಸಂಪರ್ಕಿಸಿ

ಮಂಜು– 953530417, 8618187339

13ನೇ ವರ್ಷದಲ್ಲಿ

ಹಾಸನ ವಾಣಿ

http://hassanvani.epapertoday.com ಸಂಪಾದಕರು ಲೀಲಾವತಿ E-mail:hassanvani@gmail.com

*ಬೆಂಗಳೂರು: "ಭಾಷೆ ಅರಿವಿನ ಬಗ್ಗೆ ಇರುವ ನಿಯಮ ರೂಪಿಸುವಾಗ ಐಬಿಪಿಎಸ್ (ಬ್ಯಾಂಕ್ ಪರೀಕ್ಷೆಗಳನ್ನು ನಡೆಸುವ ಏಜೆನ್ಸಿ) ಪೂರ್ತಿ ವ್ಯತ್ಯಾಸ ಮಾಡಿಟ್ಟಿದೆ. ಇಂಥ ನಿಯಮ ಮಾಡಿರುವುದರಿಂದ ಪ್ರಾದೇಶಿಕ ಭಾವನೆಗಳಿಗೆ ಸ್ಪಂದಿಸುವ ಸಂವೇದನಾಶೀಲತೆಯನ್ನೇ ಕಳೆದುಕೊಂಡಿದೆ. ಇದರಿಂದ ನಮ್ಮ ರಾಜ್ಯದ ಯುವಕರ ಮನಸಿಗೆ ಘಾಸಿಯಾಗಿದೆ." –ದೇಶದಾದ್ಯಂತ ಜಾರಿಯಲ್ಲಿರುವ ಬ್ಯಾಂಕ್ ಗಳ ನೇಮಕಾತಿ ವಿಧಾನದ ಬಗ್ಗೆ ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರ ಹಣಕಾಸು ಸಚಿವ ಅರುಣ್ ಜೇಟ್ಲಿಗೆ ಖಡಕ್ ಪತ್ರ ಬರೆದಿದ್ದಾರೆ.

ಹಾಸನವಾಣಿ ಕನ್ನಡ ದಿನಪತ್ರಿಕೆ DAILY ಸಂಪುಟ:13 ಸಂಚಿಕೆ 189, ಮಂಗಳವಾರ, 12–09–2017,ದೂ.ಸಂಖ್ಯೆ 265898,ಬೆಲೆ ರೂ 1.50, ಪುಟ 4 RNI-16681/2004 KA/SK/HSN-/753/2017-2019

ರಾಷ್ಟ್ರೀಯ ಪಿಂಚಣಿ ಸೇರ್ಪಡೆ ಗರಿಷ್ಠ ವಯಸ್ಸು 65ಕ್ಕೆ ಏರಿಕೆ

ಹೊಸದಿಲ್ಲಿ :ಸೆ,11– ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್ಪಿಎಸ್) ಸೇರ್ಪಡೆಯ ಗರಿಷ್ಠ ವಯೋಮಿತಿಯನ್ನು ಈಗಿನ 60ರಿಂದ 65ಕ್ಕೆ ಏರಿಸಲಾಗಿದೆ ಎಂದು ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (ಪಿಎಫ್ಆರ್ಡಿಎ) ಇಂದು ಸೋಮವಾರ ಪ್ರಕಟಿಸಿದೆ.

ಪಿಎಫ್ಆರ್ಡಿಎ ಇದರ ಅಧ್ಯಕ್ಷ ಹೇಮಂತ ಕಂಟ್ರಾಕ್ಟರ್ ಅವರು ಈ ವಿಷಯವನ್ನು ಇಂದಿಲ್ಲಿ ನಡೆದ ಸಮಾವೇಶದಲ್ಲಿ ಪ್ರಕಟಿಸಿದರು. ಜನರ ನಿವೃತ್ತಿ ನಿಧಿಯನ್ನು ರಾಷ್ಟ್ರೀಯ ಪಿಂಚಣಿ ನಿಧಿಗೆ ವರ್ಗಾಯಿಸುವ ಕುರಿತಾದ ಸಮಾವೇಶದಲ್ಲಿ ಮಾತನಾಡುತ್ತಿದ್ದ ಅವರು, "ಗರಿಷ್ಠ ವಯೋಮಿತಿ ಏರಿಕೆ ಪ್ರಸ್ತಾವಕ್ಕೆ ಈಗಾಗಲೇ ಅನುಮತಿ ನೀಡಲಾಗಿದ್ದು ಈಗಿನ್ನು ಶೀಘ್ರದಲ್ಲೇ ಆ ಬಗ್ಗೆ ಅಧಿಸೂಚನೆ ಹೊರಟು ಬರಲಿದೆ' ಎಂದು ತಿಳಿಸಿದರು.ಎನ್ಪಿಎಸ್ ಪ್ರಕೃತ 18ರಿಂದ 60 ವರ್ಷ ವಯಸ್ಸಿನವರಿಗೆ ಮುಕ್ತವಾಗಿದೆ ಮತ್ತು ನಮ್ಮ ಮಂಡಳಿಯು ಈ ಯೋಜನೆ ಸೇರ್ಪಡೆಯ ಗರಿಷ್ಠ ವಯೋಮಿತಿಯನ್ನು 60ರಿಂದ 65ಕ್ಕೆ ಏರಿಸಿದೆ' ಎಂದು ಕಂಟ್ರಾಕ್ಟರ್ ಹೇಳಿದರು. ಎನ್ಪಿಎಸ್ ಯೋಜನೆ ಸದಸ್ಯರು ತಮ್ಮ 70 ವರ್ಷ ಪ್ರಾಯದ ವರೆಗೂ ನಿಧಿಗೆ ವಂತಿಗೆ ನೀಡಬಹುದಾಗಿದೆ ಎಂದವರು ತಿಳಿಸಿದರು.

ಎಲ್ಲಾ ಯೋಜನೆ ಪೂರ್ಣಗೊಳ್ಳಲು 1 ಲಕ್ಷ ಕೋಟಿ ಬೇಕು: ಎಂಬಿ ಪಾಟೀಲ್

ಚಿತ್ರದುರ್ಗ, ಸೆ. 11: ರಾಜ್ಯದಲ್ಲಿ ಚಾಲ್ತಿಯಲ್ಲಿರುವ ಎಲ್ಲಾ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲು ಸರ್ಕಾರಕ್ಕೆ ಕನಿಷ್ಠ 1 ಲಕ್ಷ ಕೋಟಿ ರು ಬೇಕಾ ಗುತ್ತದೆ ಎಂದು ಜಲ ಸಂಪನ್ಮೂಲ ಸಚಿವ ಎಂಬಿ ಪಾಟೀಲ್ ಹೇಳಿದರು. ಭದ್ರಾ ಮೇಲ್ದಂಡೆ ಯೋಜನೆ ಕಾಮಗಾರಿ ಬಗ್ಗೆ ಮಾತನಾಡಿದ ಎಂಬಿ ಪಾಟೀಲ್, ಈ ವರ್ಷಾಂತ್ಯಕ್ಕೆ ಅಜ್ಜಂಪುರ ಬಳಿ ಕಾಲುವೆ ನಿರ್ಮಾಣ ಪೂರ್ಣ ಗೊಳ್ಳುವ ನಿರೀಕ್ಷೆಯಿದೆ. ಕೆಲ ತಾಂತ್ರಿಕ ಸಮಸ್ಯೆಯಿಂದ ಯೋಜನೆ ಕಾಮಗಾರಿಯ ಪ್ರಗತಿ ಕುಂಠಿತವಾಗಿದೆ ಎಂದರು. ಮುಂದಿನ ಖಾರಿಫ್ ಬೆಳೆ ಋತುವಿಗೆ ಕಾಮಗಾರಿ ಅಂತ್ಯಗೊಳ್ಳಲಿದೆ. ಐದು ವರ್ಷಗಳ ಅವಧಿಗೆ 50,000 ಕೋಟಿ ರು ವೆಚ್ಚದಲ್ಲಿ ನೀರಾವರಿ ಯೋಜನೆಗಳು ಸಿದ್ಧಪಡಿಸಲಾಗಿತ್ತು. ಈ ಪೈಕಿ 42 ಸಾವಿರ ಕೋಟಿ ಖರ್ಚು ಮಾಡಲಾಗಿದೆ. ಮಿಕ್ಕ ಮೊತ್ತವನ್ನು ಬಳಸಿ ಮುಂದಿನ ಮಾರ್ಚ್ ಒಳಗೆ ನೀರಾವರಿ ಕಾಮಗಾರಿ ಗಳನ್ನು ಪೂರೈಸಲಾಗುವುದು ಎಂದರು. ಚಿತ್ರದುರ್ಗ ತಾಲೂಕಿನ ಬ್ರಹ್ಮಸಾಗರ, ಯಮ್ಮಿಹಟ್ಟಿ ಕೆರೆ ಗಳಿಗೆ ಏತ ನೀರಾವರಿ ಮೂಲಕ 14 ಕೋಟಿ ರು ವೆಚ್ಚದಲ್ಲಿ ನೀರು ಒದಗಿಸಲಾಗುವುದು. ಇದೇ ರೀತಿ ಜಿಲ್ಲೆಯ ಎಲ್ಲಾ ಕೆರೆಗಳಿಗೂ ನೀರು ಒದಗಿಸುವ ಯೋಜನೆಗೆ ಸದ್ಯದಲ್ಲೇ ಸಿಎಂ ಸಿದ್ದರಾಮಯ್ಯ ಅವರು ಚಾಲನೆ ನೀಡಲಿದ್ದಾರೆ ಎಂದರು.

ಮಹಿಳೆಯರು ಸ್ವಾವಲಂಭಿಗಳಾಗುವಂತೆ ಸಲಹೆ

ರಾಮನಾಥಪುರ:ಸೆ,11– ಮಹಿಳೆಯರು ಸ್ವಾವಲಂಬಿಗಳಾಗಿ ಸಮಾಜದ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸಬೇಕು ಎಂದು ಮಾಜಿ ಶಾಸಕ ಎ. ಟಿ. ರಾಮಸ್ವಾಮಿ ತಿಳಿಸಿದರು.

ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ , ಸೆಲ್ಕೊ ಸೋಲಾರ್ ಪ್ರೈವೆಟ್ ಲಿಮಿಟೆಡ್ ಹಾಗೂ ಯೂನಿಯನ್ ಬ್ಯಾಂಕ್ ಹಾಸನ ಮತ್ತು ಪ್ರಗತಿ ಬಂಧು ಸ್ವ ಸಹಾಯ ಸಂಘಗಳ ಒಕ್ಕೂಟ ಇವರ ಸಂಯುಕ್ತ ಆಶ್ರಯದಲ್ಲಿ ರಾಮನಾಥಪುರದ ಗೀತಾಂಜಲಿ ಕನ್ವೆಕ್ಷನಲ್ ಹಾಲ್‌ನಲ್ಲಿ ಹಮ್ಮಿಕೊಂಡಿದ್ದ ಸೋಲಾರ್ ಅನುದಾನ ಹಾಗೂ ಜನ್ ಧನ್ ಖಾತೆಗಳ ರೂಪೆಕಾರ್ಡ್ ವಿತರಣಾ ಕಾರ್ಯಕ್ರಮ ಉದ್ಘಾಟಿಸಿ ಮಾತ ನಾಡಿದ ಅವರು,ಕೆಲವರು 'ಕಾಲಕ್ಕೆ' ಮಹತ್ವವನ್ನು ಕೊಟ್ಟರೆ ಮತ್ತೆ ಕೆಲವರು 'ಕಾಸಿಗೆ' ಮಹತ್ವವನ್ನು ಕೊಡುತ್ತಾರೆ. ಪ್ರತಿಯೊಬ್ಬ ನಾಗರೀಕನೂ ಬ್ಯಾಂಕ್ ಖಾತೆಯನ್ನು ಹೊಂದಬೇಕು. ನಿಮ್ಮ ಭವಿಷ್ಯವನ್ನು ಹಸನು ಮಾಡಿಕೊಳ್ಳಬೇಕು. ನಾವುಗಳು ಕಲುಷಿತ ವಾತವರಣದಲ್ಲಿ ಜೀವಿಸುತ್ತಿದ್ದೇವೆ. ಹಾಗಾಗಿ ಪರಿಸರ ಸಂರಕ್ಷಣೆ ನಮ್ಮೆಲ್ಲರ ಕರ್ತವ್ಯವಾಗಬೇಕು ಎಂದರು.

ಪರಿಸರವನ್ನು ಸಂರಕ್ಷಿಸಿ ಸೋಲಾರ್ ಅನುಧಾನದ ಬದಲು ಪರಿಸರ ರಕ್ಷಣೆಗಾಗಿ ಉತ್ತಮ ಸಸಿಗಳನ್ನು ಕೊಟ್ಟಾಗ ಬಡತನದ ಕುಟುಂಬಗಳಿಗೆ (ಶೋಷಿತರಿಗೆ) ನೆರವಾಗಬಹುದು ಎಂದು ಅಭಿ ಪ್ರಾಯಪಟ್ಟ. ಧರ್ಮಸ್ಥಳ ಗ್ರಾಮೀಣಾ ಭಿವೃದ್ಧಿ ಯೋಜನೆ 5 ವರ್ಷಗಳಿಂದ ಉತ್ತಮ ಕಾರ್ಯಕ್ರಮಗಳನ್ನು ನೀಡುತ್ತಾ ಬಂದಿದೆ. ಕಡು ಬಡವರಿಗೆ ಹೊಸ ಭರವಸೆಯನ್ನು ಮೂಡಿಸುತ್ತಾ ಬಂದಿದೆ ಎಂದರು. ನೂರಾರು ಮಹಿಳೆಯರಿಗೆ ಸೋಲಾರ್ ಅನುದಾನ (500 ರೂ) ಹಾಗೂ ರೂಪೆ ಕಾರ್ಡ್ ಗಳನ್ನು ಕಾರ್ಯಕ್ರಮದಲ್ಲಿ ಅಶೋಕ್ ಕುಮಾರ್ ದಾಸ್ ಕ್ಷೇತ್ರಿಯ (ಪ್ರಭಂದಕರು ಮಂಗಳೂರು)ವಿತರಿಸಿದರು.

ಕಾರ್ಯಕ್ರಮದಲ್ಲಿ ಹಾಸನ ಜಿಲ್ಲಾ ಪಂಚಾಯಿತ್ ಉಪಾಧ್ಯಕ್ಷ ಶ್ರೀನಿವಾಶ್ ಹಾರಂಗಿ ಮಹಾಮಂಡಳಿ ಅಧ್ಯಕ್ಷ ಚೌಡೆಗೌಡ ಮಾಜಿ ಜಿಲ್ಲಾ ಪಂಚಾಯಿತ್ ಸಧಸ್ಯ ಹೆಚ್ ಎಸ್ ಶಂಕರ್ ಮಾಜಿ ತಾಲ್ಲೂಕು ಪಂಚಾಯಿತ್ ಸಧಸ್ಯ ವೀರೆಶ್ ರಾಮನಾಥಪುರದ ಭಾಗ್ಯಲಕ್ಷ್ಮಿ ಹಾಗೂ ಯೋಜನಾಧಿಕಾರಿ ಜಯಂತಿ ಉಪಸ್ಥಿತರಿದ್ದರು.

ಶೀತಪೀಡಿತ ಪ್ರದೇಶಕ್ಕೆ ಪ್ರಾದೇಶಿಕ ಆಯುಕ್ತೆ ಭೇಟಿ

ಹೊಳೆನರಸೀಪುರ:ಸೆ,11– ಶೀತಪೀಡಿತ ಪ್ರದೇಶದಲ್ಲಿರುವ ಗ್ರಾಮದ ಜನರನ್ನು ಸ್ಥಳಾಂತರಗೊಳಿಸಿ ಅವರಿಗೆ ಸೂಕ್ತ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಸರ್ಕಾರಕ್ಕೆ ಸೂಕ್ತ ವರದಿ ಸಲ್ಲಿಸ ಲಾಗುವುದು ಎಂದು ಶೀತಪೀಡಿತ ಇಲಾಖೆ ಪ್ರಾದೇಶಿಕ ಆಯುಕ್ತೆ ಎಂ.ವಿ. ಜಯಂತಿ ತಿಳಿಸಿದರು.

ತಾಲ್ಲೂಕಿನ ಶೀತಪೀಡಿತ ಪ್ರದೇಶಗಳೆಂದು ಗುರುತಿಸಲ್ಪಟ್ಟಿರುವ ತಾಲ್ಲೂಕಿನ ಬೀಚೇನಹಳ್ಳಿ, ಕುಂಚೇವು, ಹೊಸಹಳ್ಳಿ ಗ್ರಾಮಗಳಿಗೆ ತಂಡದೊಂದಿಗೆ ಭೇಟಿ ನೀಡಿ ಮನೆ ಮನೆಗೆ ತೆರಳಿ ಮನೆಗಳ ಸ್ಥಿತಿಗತಿ ಕುರಿತು ಖುದ್ದು ಪರಿಶೀಲನೆ ನಡೆಸಿ ಸುದ್ದಿಗಾರರೊಂದಿಗೆ ಮಾತನಾ ಡಿದರು.

ಭೇಟಿ ಸಂದರ್ಭದಲ್ಲಿ ಮನೆ ಮಾಲೀಕರ ವಿಳಾಸವನ್ನು ಪಡೆದುಕೊಂಡ ಆಯುಕ್ತರು ಸ್ಥಳಾಂತರ ಮತ್ತು ಪರಿಹಾರ ಕೊಡಿಸುವ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು ಎಂದರು.

ಬೀಚೇನಹಳ್ಳಿ ಗ್ರಾಮದಲ್ಲಿರುವ ಶಾಲೆ ಮತ್ತು ಶೀತಪೀಡಿತ ಪ್ರದೇಶ ವ್ಯಾಪ್ತಿಯಲ್ಲಿ ದಲಿತರು ವಾಸಿಸುತ್ತಿರುವ ಮನೆಗಳ ದುಸ್ಥಿತಿ ಕುರಿತು ಕೂಲಂಕುಶವಾಗಿ ಪರಿಶೀಲಿಸಿದ ಆಯುಕ್ತರು ಮನೆಗಳು ಶಿಥಿಲಗೊಂಡು ಬೀಳುವ ಹಂತಕ್ಕೆ ತಲುಪಿರುವುದನ್ನು ಕಂಡು ಮರುಗಿದ ಸಂದರ್ಭ ಎದುರಾಯಿತು. ಈ ಕುರಿತು ಸುದ್ದಿಗಾರರಿಗೆ ಮಾಹಿತಿ ನೀಡಿದ ಹೇಮಾವತಿ ಯೋಜನೆಯ ಕಾರ್ಯಪಾಲಕ ಅಭಿಯಂತರ ಸುಬ್ರಾಯಿಗೌಡ ತಾಲ್ಲೂಕಿನ ಬೀಚೇನಹಳ್ಳಿ ಗ್ರಾಮವು ಹೇಮಾವತಿ ಎಡದಂಡೆ ನಾಲೆಯ ವಿತರಣಾ ನಾಲೆ 21ರಲ್ಲಿ 6.70 ಕ್ಯೂಸೆಕ್ಸ್ ನೀರಿನ ಅರಿವಿಕೆ ಇರುತ್ತದೆ. ಈ ವಿತರಣಾ ನಾಲೆಯು ಗ್ರಾಮದಿಂದ 20 ಮೀಟರ್ ದೂರದಲ್ಲಿದ್ದು ನಾಲೆ ಯಿಂದ ಸರಾಸರಿ 3.715 ಮೀಟರ್ ನಷ್ಟು ಕೆಳಭಾಗದಲ್ಲಿದೆ. ಈ ವಿತರಣಾ ನಾಲೆಗೆ ಎರಡೂ ಕಡೆ ಕ್ಷೇತ್ರ ಕಾಳುವೆ ಯನ್ನು ಮಾಡಲಿದ್ದು ಈ ಕಾಲುವೆಗಳ ಮುಖಾಂತರ ನೀರನ್ನು ಬೆಳೆಗಳಿಗೆ ಹರಿಯಬಿಡಲಾಗುತ್ತಿದೆ. ಇಲ್ಲಿಯ ಮನೆಗಳನ್ನು ಇಟ್ಟಿಗೆ, ಕಾಂಕ್ರಿಟ್, ಕಟ್ಟಡಗಳು ಹಾಗೂ ಕಲ್ಲು ಮಣ್ಣಿನಿಂದ ಕೂಡಿದ ಕಟ್ಟಡಗಳಾಗಿರುತ್ತವೆ ಎಂದರು.

ಇಂದಿನಿಂದ ರಾಮನಾಥಪುರದಲ್ಲಿ ಕಾವೇರಿ ಪುಷ್ಕರ ಸ್ನಾನ

ಹಾಸನ: ಸೆ,11–ದಕ್ಷಿಣ ಕಾಶಿ ಎಂದೇ ಪ್ರಸಿದ್ಧಿ ಪಡೆದಿರುವ ರಾಮನಾಥಪುರದಲ್ಲಿ ಸೆಪ್ಟಂಬರ್ 12 ರಿಂದ 23ರ ವರೆಗೂ ಕಾವೇರಿ ಪುಷ್ಕರ ಸ್ನಾನ ಜರುಗಲಿದೆ ಎಂದು ಅರೇಮಾದನಹಳ್ಳಿ ಮಹಾ ಸಂಸ್ಥಾನ ವಿಶ್ವಕರ್ಮ ಜಗದ್ಗುರು ಪೀಠದ ಶ್ರೀ ಶಿವಸುಜ್ಞಾನತೀರ್ಥ ಮಹಾಸ್ವಾಮೀಜಿ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ ಅವರು, ನಮ್ಮ ಕನ್ನಡ ನಾಡಿನಲ್ಲಿ ಅನೇಕ ಪುಣ್ಯ ಕ್ಷೇತ್ರಗಳು, ಪುಣ್ಯ ನದಿಗಳು ಇದ್ದರೂ ಕಾವೇರಿ ನದಿಗೆ ಒಂದು ವಿಶೇಷವಾದ ಮಹತ್ವವಿದೆ. ಕೊಡಗಿನಲ್ಲಿ ಹುಟ್ಟುವ ಕಾವೇರಿ ಗಂಗೆಯಷ್ಟೆ ಪವಿತ್ರಳಾಗಿದ್ದು ಮ ನಾಡಿಗೆ ಜೀವನದಿ ಎಂದರು.

ಕೊಡಗಿನ ತಲಕಾವೇರಿಯ ಬ್ರಹ್ಮಗಿರಿಯ ತಪಲಿನಲ್ಲಿ ಜನ್ಮತಾಳಿ, ಬಂಗಾಳ ಕೊಲ್ಲಿಯ ವರೆಗೂ ಹರಿದು ಲಕ್ಷಾಂತರ ಜನರ ಬಾಯಾರಿಕೆ ಹಾಗೂ ಹಸಿವನ್ನು ನೀಗಿಸುವ ಕಾವೇರಿ ಪವಿತ್ರವಾದದು ಎಂದರು.

ಜ್ಯೋತಿಷ್ಯ ಹಾಗೂ ಪುರಾಣಗಳ ರೀತಿಯಲ್ಲಿ ಗುರು ಗ್ರಹವು ತುಲಾ ರಾಶಿಗೆ ಪ್ರವೇಶ ಮಾಡಿದಾಗ ನಮ್ಮ ಕಾವೇರಿ ನದಿಗೆ ಸಕಲ ನದಿಗಳ ತೀರ್ಥಗಳ ಸಂಗಮವಾಗುವುದು ಎಂದು ಶಾಸ್ತ್ರಗಳು ಸಾರುತ್ತದೆ. ಮಹಾಪರ್ವಕಾಲದಲ್ಲಿ ಕುಟುಂಬ ಸಮೇತರಾಗಿ ಸಂಕಲ್ಪ ಸಹಿತ ಸ್ನಾನ ಮಾಡುವುದರಿಂದ ಸಕಲ ದೋಷಗಳು ನಿವಾರಣೆಯಾಗಿ ಸಕಲ ಇಷ್ಟಾರ್ಥಗಳು ನೆರವೇರುವುದು ಎಂದರು.

ಎಲ್ಲಾ ಮಠಾಧಿಪತಿಗಳ ಆರ್ಶಿರ್ವಾದದೊಡನೆ ಪ್ರಖ್ಯಾತ ಜ್ಯೋತಿಷಿಗಳಾದ ಆಚಾರ್ಯ ಶ್ರೀ ಗುರುಪ್ರಕಾಶ್ ಗುರೂಜಿ ನೇತೃತ್ವದಲ್ಲಿ ರಾಮನಾಥಪುರದ ಗುರುಗಳು ಹಾಗೂ ಪ್ರಮುಖರ ಸಹಕಾರದಲ್ಲಿ ಲೋಕ ಕಲ್ಯಾಣಾರ್ಥವಾಗಿ ಸಮರ್ಪಕ ಮಳೆ ಬೆಳೆ ಮತ್ತು ಅನ್ನದಾತರ ಅಭ್ಯುದಯದ ಸಂಪ್ರಾರ್ಥನೆಗಾಗಿ ಕಾವೇರಿ ನದಿಯ ಪಾವಿತ್ರ್ಯತೆಯನ್ನು ಉಳಿಸುವ ನಿಟ್ಟನಲ್ಲಿ ರಾಮನಾಥಪುರ ಅರೇಮಾದನಹಳ್ಳಿ ಶಾಖಾ ಮಠದಲ್ಲಿ 12 ದಿನಗಳ ಕಾಲ ವಿಶೇಷ ಪೂಜೆ, ಹೋಮವನ್ನು ನಡೆಸುವುದಾಗಿ ಹೇಳಿದರು.

ಅಂದು ಅರಕಲಗೂಡು ದೊಡ್ಡಮಠದ ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಜಿ, ಶ್ರೀ ಆದಿ ಚುಂಚನಗಿರಿ ಶಾಖಾ ಠಠದ ಶ್ರೀ ಶಂಭುನಾಥ ಸ್ವಾಮಿಜಿ, ಕೆ.ಆರ್. ನಗರ ಕನಕಗುರು ಪೀಠದ ಶ್ರೀ ಶಿವನಂದಪುರಿ ಮಹಾ ಸ್ವಾಮೀಜಿ, ಅರಕಲಗೂಡು ಚೆಲುಮೆ ಮಠದ ಶ್ರೀ ಜಯದೇವ ಮಹಾಸ್ವಾಮೀಜಿ, ಬಸವಪಟ್ಟಣದ ಶ್ರಿ ಬಸವಲಿಂಗ ಮಹಾಸ್ವಾಮೀಜಿ, ಕೆಸವತ್ತೂರು ಮಠದ ಶ್ರೀ ಬಸವರಾಜೇಂದ್ರ ಸ್ವಾಮೀಜಿ, ಶಿರದನಹಳ್ಳಿ ಬಸವ ಕಲ್ಯಾಣ ಮಠದ ಶ್ರೀ ಸಿದ್ದಲಿಂಗ ಸ್ವಾಮೀಜಿ ಇತರರು ಭಾಗವಹಿಸಲಿದ್ದಾರೆ. ಪ್ರತಿದಿನ ಸಂಜೆ 4 ಗಂಟೆಯಿಂದ 6–30ರ ವರೆಗೂ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿದೆ. ಸಂಜೆ 7ಕ್ಕೆ 12 ವಿಶೇಷ ಆರತಿಗಳೊಂದಿಗೆ ಕಾವೇರಿ ನದಿಗೆ ಮಹಾ ಮಂಗಳಾರತಿ ಮಾಡಿದ ಬಳಿಕ ತೀರ್ಥ ಪ್ರಸಾದ ನೀಡುವುದಾಗಿ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಹೈದರಾಬಾದ್ ಪ್ರಖ್ಯಾತ ಜ್ಯೋತಿಷಿಗಳಾದ ಆಚಾರ್ಯ ಶ್ರೀ ಗುರುಪ್ರಕಾಶ್ ಗುರೂಜಿ ಇತರರು ಉಪಸ್ಥಿತರಿದ್ದರು.

ಜಿಲ್ಲಾ ಕೇಂದ್ರಗಳಿಗೆ ಇಂದಿರಾ ಕ್ಯಾಂಟಿನ್ ವಿಸ್ತರಣೆಗೆ ಪ್ರತಿಭಟನೆ

ಹಾಸನ: ಸೆ,11– ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರಗಳು ಹಾಗೂ ಸರಕಾರಿ ಶಾಲಾ–ಕಾಲೇಜು, ಆಸ್ಪತ್ರೆಗಳ ಬಳಿ ಇಂದಿರಾ ಕ್ಯಾಂಟಿನ್ ಆರಂಭಿಸುವಂತೆ

[redacted]

ಮಾತರಂ ಸಂಘ
ನೂರಾರು
ಜಿಲ್ಲಾಧಿಕಾರಿಗ
ಆವರಣದಲ್ಲಿ ಪ್ರತಿಭ
ಆಗಸ್ಟ್ ತಿ
ಳೂರಿನ ವ್ಯಾಪ್ತಿಯ
101 ವಾರ್ಡ್‌ಗಳಲ್ಲಿ
ಇಂದಿರಾ ಕ್ಯಾಂ
ಭಿಸಿದೆ. ಬಡವರ
ಪರಿಹಾರ ನೀಡು
ರೂಪಿಸಿರುವ
ಯೋಜನೆಯನ್ನು
ಮುಖ್ಯಮಂತ್ರಿಗಳ
ಯನ್ನು ಜಿಲ್ಲೆಯ
ಂಗಳಿಗೂ ನೀಡ
ಒತ್ತಾಯಿಸಿದರು.
ಕಳೆದ 15

ರಿನಲ್ಲಿ ನಡೆಯುತ್ತಿರುವ ಈ
ನೆ ಅನೇಕ ಬಾಲಗ್ರಹಗಳ
ದಲ್ಲಿರುವುದನ್ನು ತಿಳಿದಿದೆ.
ಯಾಂಟಿನ್ ಬಡವರಿಗಿಂತ
ತರೇ ಸಾಲು ನಿಂತು
ಪಡೆಯುತ್ತಿದ್ದಾರೆ. ಇಲ್ಲಿ
ಗಿಂತ ಕನ್ನಡೇತರರೇ ಹೆಚ್ಚು
ದರಿಂದ ನಮ್ಮ ನಾಡ
ಸರಿಯಾಗಿ ಸಿಗುತ್ತಿಲ್ಲ
ದೂರಿದರು. ಇಂತಹ
ನೆ ಸಂಪೂರ್ಣ ಲಾಭ ಬಡ
ಗರಿಗೆ ದಕ್ಕಲೇಬೇಕು.
ರು ನಗರಗಿಂತಲೂ ಅತಿ

ಹೆಚ್ಚಿನ ಬಡವರು ಹೊರ ಜಿಲ್ಲೆಯಲ್ಲಿ ಇದ್ದಾರೆ. ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳು ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಸ್ಥಾಪಿತವಾಗಬೇಕು. ಹಳ್ಳಿಗಳಿಂದ ತಾಲ್ಲೂಕು ಹಾಗೂ ಜಿಲ್ಲಾ ಕೇಂದ್ರಗಳಿಗೆ ಬರುವ ಬಡ ರೈತ ಕಾರ್ಮಿಕರಿಗೆ ಅನುಕೂಲವಾಗುವಂತೆ ತಹಸೀಲ್ದಾರ್, ಜಿಲ್ಲಾಧಿಕಾರಿಗಳ ಕಛೇರಿ ಹಾಗೂ ಸರಕಾರಿ ಆಸ್ಪತ್ರೆಗಳ ಬಳಿ ಇಂದಿರಾ ಕ್ಯಾಂಟಿನ್ ಆರಂಭಿ ಸಬೇಕು. ಹಳ್ಳಿಗಳಿಂದ ವಿದ್ಯಾರ್ಥಿಗಳು ಬೆಳಿಗ್ಗೆ ಮನೆಯಿಂದ ಆಹಾರ ಸೇವಿಸದೆ ಶಾಲಾ–ಕಾಲೇಜುಗಳಿಗೆ ಬರುತ್ತಿದ್ದಾರೆ. ಹಸಿದ ವಿದ್ಯಾರ್ಥಿ ಗಳಿಗೆ ಅನುಕೂಲವಾಗುವಂತೆ ಕ್ಯಾಂಟಿನ್ ನೀಡಬೇಕು ಎಂದು ಹೇಳಿದರು.

ಈಗಾಗಲೇ ಸರಕಾರ ಶಾಲೆಗಳಲ್ಲಿ ಬಿಸಿಯೂಟ ಯೋಜನೆಯನ್ನು ನಡೆಸುತ್ತಿದೆ. ಇದರಲ್ಲೂ ಅನೇಕ ವೈಫಲ್ಯಗಳಿವೆ. ಬಿಸಿಯೂಟದ ಆರ್ಥಿಕ ಸಂಪನ್ಮೂಲವನ್ನು ಇಂದಿರಾ ಕ್ಯಾಂಟಿನ್ ಗಳಲ್ಲಿ ತೊಡಗಿಸಿದರೇ ವಿದ್ಯಾರ್ಥಿಗಳಿಗೆ ರುಚಿಕರ ಆಹಾರ ಒದಗಿಸಬಹುದು. ಮತ್ತು ಶಿಕ್ಷಕರ ಮೇಲಿನ ಒತ್ತಡವು ಕಡಿಮೆ ಆಗುತ್ತದೆ ಎಂದು ಸಲಹೆ ನೀಡಿ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ವಂದೇ ಮಾತರಂ ಸಂಘಟನೆ ರಾಜ್ಯಾಧ್ಯಕ್ಷ ಧರ್ಮರಾಜ್ ಕಡಗ, ರೈತರ ಘಟಕದ ತಾಂಡವೇಶ್ವರ್, ಐಟಿಬಿಟಿ ಘಟಕದ ತೇಜಸ್, ಮಹಿಳಾ ವಿದ್ಯಾರ್ಥಿ ಘಟಕದ ಭುವನ ಇತರರು ಇದ್ದರು.

ಕೆರೆಗಳಿಗೆ ನೀರು ತುಂಬಿಸುವಂತೆ ಸರ್ಕಾರಕ್ಕೆ ಒಂದು ವಾರ ಗಡುವು

ಹಾಸನ: ಸೆ,11– ಹಳೇಬೀಡು ಮಾದಿ ಹಳ್ಳಿ ಹಾಗೂ ಜಾವಗಲ್ ಕೆರೆಗಳಿಗೆ ನೀರು ತುಂಬಿಸುವಂತೆ ಆಗ್ರಹಿಸಿ ಒಂದು ವಾರ ಗಡುವು ನೀಡ ಲಾಗಿದೆ. ಸರ್ಕಾರಇದಕ್ಕೆ ಸ್ಪಂದಿಸ ದಿದ್ದರೆ ಬೇಲೂರಿನಲ್ಲಿ ರೈತರು , ಹೋರಾಟಗಾರರ ಜೊತೆ ಸ್ವಾಮೀಜಿ ಗಳು ಉಪವಾಸ ಸತ್ಯಾಗ್ರಹ ಮಾಡು ವುದಾಗಿ ಪುಷ್ಪಗಿರಿ ಮಠದ ಶ್ರೀ ಸೋಮಶೇಖರ ಸ್ವಾಮೀಜಿ ಎಚ್ಚರಿಕೆ ನೀಡಿದರು.

ನಗರದ ಮಿನಿ ವಿಧಾನಸೌಧದ ಕಛೇರಿಯಲ್ಲಿ ಕೆರೆಗಳಿಗೆ ನೀರು ತುಂಬಿಸುವಂತೆ ಕಾರ್ಯಪಾಲಕ ಇಂಜಿನಿಯರ್ ವಿ.ವಿ. ನಾರಾಯಣ್‌ಗೆ ಮನವಿ ಮಾಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಸ್ವಾಮೀಜಿ ತಾಲ್ಲೂಕಿನ ರಣಘಟ್ಟ ಚೆಕ್ ಡ್ಯಾಂ ಹಾಗೂ ದ್ವಾರಸಮುದ್ರ ಕಾಲುವೆ ನವೀಕರಣ ಸೇರಿದಂತೆ ಎತ್ತಿನಹೊಳೆ ಹಾಗೂ ಯಗಚಿ ಏತ ನೀರಾವರಿ ಮೂಲಕ ಹಳೇಬೀಡು ಮಾದಿಹಳ್ಳಿ ಹಾಗೂ ಜಾವಗಲ್ ಕೆರೆಗಳಿಗೆ ನೀರು ತುಂಬಿಸುವಂತೆ ಕಳೆದ ಒಂದು ವಾರಗಳ ಹಿಂದೆ ಬೇಲೂರಿನಲ್ಲಿ ರಸ್ತೆ ತಡೆದು ಪ್ರತಿಭಟನೆ ಮಾಡಲಾಗಿತ್ತು. ಕ್ಷೇತ್ರದ ಶಾಸಕರು ಕೂಡಲೇ ನೀರಾವರಿ ಸಚಿವರೊಂದಿಗೆ ಚರ್ಚಿಸಿ ತಕ್ಷಣದಲ್ಲಿ ಕಾಮಗಾರಿಯ ಅನುದಾನ ಮಂಜೂರು ಮಾಡಿಸಬೇಕು. ಇಲ್ಲವಾದರೇ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಒತ್ತಾಯಿಸಿದ್ದಾಗ ಒಂದು ವಾರದೊಳಗೆ ಕಾಮಗಾರಿ ಪ್ರಾರಂಭಿಸಲು ಅನುಮೋದನೇಗೆ ಭರವಸೆ ನೀಡಲಾಗಿತ್ತು ಆದರೆ ಇದು ವರೆಗೂ ಯಾವುದೇ ಕಾಮಗಾರಿ ನಡೆಯುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ವಾರದೊಳಗೆ 12 ಕಿ.ಮಿ. ದ್ವಾರ ಸಮುದ್ರ ಕಾಲುವೆ ಅಭಿವೃದ್ಧಿಗೆ ಆದೇಶ ಕೊಡಬೇಕು. ಶಾಸಕರು ಕೂಡಲೇ ಸರಕಾರದ ಕಣ್ಣು ತೆರೆಸಬೇಕು. ಒಟ್ಟು 130 ಕೋಟಿಯಿಂದ 150 ಕೋಟಿ ಅಂದಾಜು ವೆಚ್ಚದ ಯೋಜನೆ ಮಾಡಲು ತಕ್ಷಣ ಸರಕಾರ ಹಣ ಬಿಡುಗಡೆ ಮಾಡಲು ಎಚ್ಚರಿಸಲಾಗಿತ್ತು. ನೀರಾವರಿ ಯೋಜನೆ ವಿಚಾರವಾಗಿ ಸರಕಾರಕ್ಕೆ ಅನೇಕ ಬಾರಿ ಮನವಿ ಸಲ್ಲಿಸಲಾಗಿದ್ದರೂ ಇದುವರೆಗೆ ಸ್ಪಂದಿಸಿರುವುದಿಲ್ಲ ಎಂದು ದೂರಿದರು. ನಮ್ಮ ಮನವಿಗೆ ಸ್ಪಂದಿಸದಿದ್ದರೇ ಸೆಪ್ಟಂಬರ್ 18 ರಂದು ಮತ್ತೆ ಹೋರಾಟ ಹಮ್ಮಿಕೊಳ್ಳಲು ನಿರ್ಧರಿಸಲಾಗಿತ್ತು. ಸರಕಾರದ ಗಮನ ಸೆಳೆಯುವ ನಿಟ್ಟನಲ್ಲಿ ಹೋರಾಟವನ್ನುಇನ್ನೊಂದು ವಾರ ಮುಂದಕ್ಕೆ ಹಾಕಲಾಗಿದೆ. ಇದರಲ್ಲಿ 6 ಮಠದ ಸ್ವಾಮೀಜಿಗಳು ಉಪವಾಸ ಸತ್ಯಗ್ರಹ ಮಾಡಲಿದ್ದಾರೆ. ರೈತರು ಸೇರಿದಂತೆ ಎಲ್ಲಾ ಸಂಘಟನೆಯ ಹೋರಾಟಗಾರರು ಕೈಜೋಡಿಸಲಿದ್ದಾರೆ ಎಂದರು. ಕಳೆದ ಎರಡು ವರ್ಷಗಳಿಂದ ಕಡತವನ್ನು ರವಾನಿಸದೆ ಅಧಿಕಾರಿಗಳು ಬೇಜವಬ್ದಾರಿ ತಾಳಿದ್ದಾರೆ ಎಂದು ಆರೋಪಿಸಿದರು. ನಮ್ಮ ಮನವಿಗೆ ಸ್ಪಂದಿಸಿ ನೀರಾ ವರಿ ಯೋಜನೆ ಕಾಮಗಾರಿಗೆ ಚಾಲನೆ ನೀಡದಿದ್ದರೇ ಸ್ವಾಮೀಜಿಗಳು ಸೇರಿ ಉಪವಾಸ ಸತ್ಯಗ್ರಹದೊಂದಿಗೆ ಬೃಹತ್ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು. ಈ ಸಂದರ್ಭದಲ್ಲಿ ಕೋಳಗುಂದ ಮಠದ ಜಯಚಂದ್ರ ಸ್ವಾಮೀಜಿ, ರೈತ ಮುಖಂಡರಾದ ಗಡಿ ಮಲ್ಲಿಕ್, ಕೆ.ಪಿ. ಕುಮಾರ್, ಶಿವಪ್ಪ, ಇತರರು ಇದ್ದರು.

ಸೆ.13ಕ್ಕೆ ಭ [redacted] ಪ್ರಧಾನಿ ಭೇಟಿ

ನವದೆಹಲಿ:ಸೆ,1
ಪ್ರಧಾನಿ ನರೇಂ
ಮೋದಿ ಅವ
ಆಹ್ವಾನದ ಹಿನ್ನೆ
ಯಲ್ಲಿ ಜಪಾ
ಪ್ರಧಾನಿ ಶಿಂಜೆ
ಅಬೆ ಸೆ.13–14
ನರೇಂದ್ರ ಮೋ
ನಡೆಯಲಿರುವ
ಭಾಗವಹಿಸಿ ಮಾ
ಭಾರತ–ಜಪಾನ
ಜಪಾನ್ ನಡುವಿ
ಇಬ್ಬರೂ ನಾ
ಹೇಳಲಾಗುತ್ತಿದೆ
ಹಿನ್ನೆಲೆಯಲ್ಲಿ ಪ್ರ
ಭಾರತ–ಜಪಾನ
ಭಾರತ ಜಪಾನ

ಕೆ ನೀಡಲಿದ್ದು, ಪ್ರಧಾನಿ
ಅಬೆ, ಗುಜರಾತ್ ನಲ್ಲಿ
2 ನೇ ಶೃಂಗಸಭೆಯಲ್ಲಿ
ತ್ ನ ಗಾಂಧಿ ನಗರದಲ್ಲಿ
ನಡೆಯಲಿದ್ದು, ಭಾರತ–
ಸಹಕಾರದ ಪ್ರಗತಿಯನ್ನು
ನಡೆಸಲಿದ್ದಾರೆ ಎಂದು
ರತಕ್ಕೆ ಆಗಮಿಸುತ್ತಿರುವ
ಪಾನ್ ನ ರಾಯಭಾರಿ,
ನ ಎಂದಿಗೂ ಚೆನ್ನಾಗಿದೆ.
ಸ್ತ್ರ ಎಂದು ಬಣ್ಣಿಸಿದ್ದಾರೆ.

ಗೌರಿ ಲಂಕೇಶ್ ಹತ್ಯೆ ತನಿಖಾ ತಂಡಕ್ಕೆ ಮತ್ತಷ್ಟು ಬಲ

ಬೆಂಗಳೂರು:ಸೆ,11– ಹಿರಿಯ ಪತ್ರಕರ್ತೆ, ಸಾಹಿತಿ ಹಾಗೂ ಹೋರಾಟಗಾರ್ತಿ ಗೌರಿ ಲಂಕೇಶ್ ಹತ್ಯೆ ಪ್ರಕರಣ ದ ತನಿಖೆಯನ್ನು ಮತ್ತಷ್ಟು ಚುರುಕುಗೊಳಿಸಲಾಗಿದ್ದು, ವಿಶೇಷ ತನಿಖಾ ತಂಡ (ಎಸ್ಐಟಿ)ವನ್ನು ಮತ್ತಷ್ಟು ಬಲಪಡಿಸುವುದಕ್ಕಾಗಿ ಹೆಚ್ಚುವರಿಯಾಗಿ 40 ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ಪತ್ರಕರ್ತೆ ಹತ್ಯೆಯಾಗಿ ಆರು ದಿನ ಕಳೆದರೂ ಇದುವರೆಗೂ ಹಂತಕರ ಬಗ್ಗೆ ಯಾವುದೇ ಸುಳಿವು ಲಭ್ಯವಾಗಿಲ್ಲ. ಹೀಗಾಗಿ ಶೀಘ್ರ ಹಂತಕರನ್ನು ಪತ್ತೆ ಹಚ್ಚುವುದಕ್ಕಾಗಿ ನಾಲ್ವರು ಇನ್ಸ್ ಪೆಕ್ಟರ್ ಮತ್ತು ಏಳು ಸಬ್ ಇನ್ಸ್ ಪೆಕ್ಟರ್ ಸೇರಿದಂತೆ ಎಸ್ಐಟಿಗೆ ಹೆಚ್ಚುವರಿಯಾಗಿ 40 ಸಿಬ್ಬಂದಿ ನೀಡಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ರಾಜ್ಯ ಸರ್ಕಾರ ಗೌರಿ ಲಂಕೇಶ್ ಹತ್ಯೆ ಪ್ರಕರಣದ ತನಿಖೆಗಾಗಿ ಪೊಲೀಸ್ ಮಹಾ ನಿರ್ದೇಶಕ(ಗುಪ್ತಚರ) ಬಿ ಕೆ ಸಿಂಗ್ ನೇತೃತ್ವದ 21 ಅಧಿ ಕಾರಿಗಳನ್ನು ಒಳಗೊಂಡ ವಿಶೇಷ ತನಿಖಾ ತಂಡ ರಚಿಸಿದೆ.ಎಸ್ಐಟಿಗೆ ಹೆಚ್ಚುವರಿ ಸಿಬ್ಬಂದಿಯನ್ನು ನೀಡಲಾಗಿದೆ. ಆದರೆ ಈ ಸಂದರ್ಭದಲ್ಲಿ ಅವರ ಹೆಸರನ್ನು ಬಹಿರಂಗಪಡಿಸು ವುದಿಲ್ಲ ಎಂದು ಉಪ ಪೊಲೀಸ್ ಆಯುಕ್ತ(ಬೆಂಗಳೂರು ಪಶ್ಚಿಮ) ಎಂ ಎನ್ ಅನುಚೇತ್ ಅವರು ಹೇಳಿದ್ದಾರೆ.

ರಾಜರಾಜೇಶ್ವರಿ ನಗರದಲ್ಲಿರುವ ಕೆಲವು ಮನೆಗಳ ಸಿಸಿಟಿವಿ ದೃಶ್ಯಗಳನ್ನು ಪೊಲೀಸರು ಪರಿಶೀಲನೆ ನಡೆಸುತ್ತಿದ್ದಾರೆ. ಅಲ್ಲದೆ ನಗರದ ಸುತ್ತ ಇರುವ ಐದು ಟೋಲ್ ಗೇಟ್ ಗಳ ಸಿಸಿಟಿವಿ ದೃಶ್ಯಗಳನ್ನು ಪಡೆದುಕೊಳ್ಳಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.ಈ ಮಧ್ಯೆ ಇಂದು ಬೆಳಗ್ಗೆ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಮಾಜಿ ನಕ್ಸಲರಾದ ನೂರ್ ಶ್ರೀಧರ್ ಹಾಗೂ ಸಿರಿಮನೆ ನಾಗರಾಜ್ ಅವರು, ಗೌರಿ ಲಂಕೇಶ್ ಅವರನ್ನು ಯಾವುದೇ ಕಾರಣಕ್ಕೂ ನಕ್ಸಲರು ಹತ್ಯೆ ಮಾಡಿರುವ ಸಾಧ್ಯತೆ ಇಲ್ಲ ಎಂದು ಹೇಳಿದ್ದಾರೆ.

ಕಳೆದ ಮಂಗಳವಾರ ರಾತ್ರಿ ಗೌರಿ ಲಂಕೇಶ್ ಅವರನ್ನು ಅವರ ರಾಜರಾಜೇಶ್ವರಿನಗರದ ನಿವಾಸದ ಮುಂದೆಯೇ ದುಷ್ಕರ್ಮಿಗಳು ಗುಂಡಿಕ್ಕಿ ಹತ್ಯೆ ಮಾಡಿ ಪರಾರಿಯಾಗಿದ್ದಾರೆ. ಪತ್ರಕರ್ತೆಯ ಹತ್ಯೆಗೆ ದೇಶಾದ್ಯಂತ ತೀವ್ರ ಖಂಡನೆ ವ್ಯಕ್ತವಾಗಿದೆ.

ವಿಧಾನಸೌಧಕ್ಕೆ ಬಾಂಬ್ ಬೆದರಿಕೆ ಕರೆ

ಬೆಂಗಳೂರು: ವಿಧಾನಸೌಧ, ವಿಕಾಸಸೌಧ ಮತ್ತು ನೆಹರು ತಾರಾಲಯವನ್ನು ಬಾಂಬ್ ಇಟ್ಟು ಸ್ಫೋಟಿಸುವುದಾಗಿ ಪೊಲೀಸರಿಗೆ ಬೆದರಿಕೆ ಕರೆ ಬಂದಿದ್ದು, ಬೆದರಿಕೆ ಹಾಕಿದ ಆರೋಪಿಗಾಗಿ ಶೋಧ ಕಾರ್ಯ ನಡೆಸುತ್ತಿರುವುದಾಗಿ ಪೊಲೀಸ್ ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಸುರೇಶ್ ಎಂಬ ವ್ಯಕ್ತಿ ತನ್ನ ಮೊಬೈಲ್ ಫೋನ್ ನಿಂದ ಪೊಲೀಸ್ ಇಲಾಖೆಯ ತುರ್ತು ಸಹಾಯವಾಣಿ 100ಕ್ಕೆ ಕರೆ ಮಾಡಿ, ಸೆಪ್ಟೆಂಬರ್ 25ರೊಳಗೆ ವಿಧಾನಸೌಧಕ್ಕೆ ನಾಗರಾಜ್ ಎಂಬಾತ ಬಾಂಬ್ ಹಾಕುತ್ತಾನೆ ಎಂದು ಬೆದರಿಕೆ ಹಾಕಿರುವುದಾಗಿ ಪೊಲೀಸರು ತಿಳಿಸಿದ್ದಾರೆ. ಬಾಂಬ್ ಬೆದರಿಕೆ ಹಿನ್ನೆಲೆಯಲ್ಲಿ ಶಕ್ತಿಸೌಧಕ್ಕೆ ಬಾಂಬ್ ನಿಷ್ಕ್ರಿಯ ದಳ ದೌಡಾಯಿಸಿದ್ದು, ಪರಿಶೀಲನೆಯಲ್ಲಿ ತೊಡಗಿದೆ. ಅಲ್ಲದೆ ವಿಧಾನಸೌಧ ಸುತ್ತಮುತ್ತ ಹೈಅಲರ್ಟ್ ಘೋಷಿಸಲಾಗಿದೆ. ಈ ಸಂಬಂಧ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.